
# ಶ್ರೀಮಾತೆಯವರ ನೆನಪು

ಬಂಗಾಳಿ ಮೂಲ: **ಸ್ವಾಮಿ ಆದಿನಾಥಾನಂದ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

೧೯೧೯ನೇ ಇಸವಿಯ ಡಿಸೆಂಬರ್‌ನಲ್ಲಿ ನಾನು ಶ್ರೀಮಾತೆಯವರ ಕೃಪೆಗೆ ಪಾತ್ರನಾದೆ. ಈ ಘಟನೆಯು ಸಂಪೂರ್ಣವಾಗಿ ಅನಿರೀಕ್ಷಿತವಾಗಿಯೇ ನಡೆದಿತ್ತು. ರಾಮಕೃಷ್ಣ ಮಿಷನ್ನಿನ ಕಲ್ಕತ್ತೆಯ ಸ್ಟೂಡೆಂಟ್ಸ್ ಹೋಂಗೆ ಸಮೀಪದಲ್ಲೇ ಇದ್ದ ವಂಗ ಛಾತ್ರವಾಸ (ಬಂಗಾಳಿ ವಿದ್ಯಾರ್ಥಿನಿಲಯ) ದಲ್ಲಿ ನಾನು ನೆಲೆಸಿದ್ದೆ. ನಾನು ಆಗಾಗ ಸ್ಟೂಡೆಂಟ್ಸ್ ಹೋಂಗೆ ಹೋಗುತ್ತಿದ್ದೆ. ಅಲ್ಲಿನ ಅಧ್ಯಕ್ಷರು ಆಗ ಅನಾದಿ ಮಹಾರಾಜ್( ಸ್ವಾಮಿ ನಿರ್ವೇದಾನಂದ). ಅವರು ವಿದ್ಯಾರ್ಥಿಗಳೊಂದಿಗೆ ಅತ್ಯಂತ ಆತ್ಮೀಯವಾಗಿ ಮಾತನಾಡುತ್ತಿದ್ದರು. ಮುಂದೆ ನಾನು ಕೆಲವು ದಿನಗಳ ಮಟ್ಟಿಗೆ ಸ್ಟೂಡೆಂಟ್ಸ್ ಹೋಂನಲ್ಲೇ ಉದ್ಯೋಗ ಮಾಡುತ್ತಿದ್ದೆ; ಬಳಿಕ ಅಲ್ಲೇ ಮಿಷನ್‌ಗೆ ಸೇರಿಕೊಂಡೆ. ಹೆಚ್ಚಾಗಿ ಪ್ರತಿ ಭಾನುವಾರವೂ ನಾನು, ಹಾಗೂ ನನ್ನಂತಹ ವಿದ್ಯಾರ್ಥಿಗಳು, ಅಥವಾ ಸ್ಟೂಡೆಂಟ್ಸ್ ಹೋಂನ ವಿದ್ಯಾರ್ಥಿಗಳು, ನನ್ನಂತೆ ಅಲ್ಲಿನ ವಿದ್ಯಾರ್ಥಿಗಳಲ್ಲದಿದ್ದರೂ ಅನಾದಿ ಮಹಾರಾಜ ಭಕ್ತರಾಗಿದ್ದವರು — ಎಲ್ಲರೂ ಬೇಲೂರು ಮಠಕ್ಕೆ ಹೋಗುತ್ತಿದ್ದೆವು. ರಾಜಾ ಮಹಾರಾಜರು (ಸ್ವಾಮಿ ಬ್ರಹ್ಮಾನಂದರು) ಮೇಲಂತಸ್ತಿನ ವರಾಂಡದಲ್ಲಿ ಗಂಗಾನದಿಯತ್ತ ತಿರುಗಿ ಕುಳಿತಿರುತ್ತಿದ್ದುದನ್ನು ನಾವು ಹೆಚ್ಚಾಗಿ ನೋಡುತ್ತಿದ್ದೆವು. ಯಾವಾಗಲೂ ಅವರ ಸಾನ್ನಿಧ್ಯವೇ ಆನಂದಮಯವಾಗಿರುತ್ತಿತ್ತು. ಅವರು ತುಂಬಾ ರಸಿಕರಾಗಿದ್ದರು. ಅವರು ನಮ್ಮನ್ನು ಪ್ರೀತಿಯಿಂದ 'ಸುರೇನನ ಗುಂಪು' ಎಂದು ಕರೆಯುತ್ತಿದ್ದರು. ಇದಕ್ಕೆ ಕಾರಣ, ಅನಾದಿ ಮಹಾರಾಜರ ಅಡ್ಡ ಹೆಸರು 'ಸುರೇನ್' ಎಂದಾಗಿತ್ತು.

೧೯೧೯ರ ಡಿಸೆಂಬರ್ ತಿಂಗಳಲ್ಲಿ ಶ್ರೀಹಟ್ಟದ (ಸಿಲ್ಹೆಟ್, ಬಾಂಗ್ಲಾದೇಶ) ಒಬ್ಬ ಯುವಕ, ಅವನ ಹೆಸರು ಹರಸುಂದರ, (ಮುಂದೆ ಅವನು ರಾಮಕೃಷ್ಣ ಮಠವನ್ನು ಸೇರಿಕೊಂಡ; ಸಂನ್ಯಾಸ ಹೆಸರು ಸ್ವಾಮಿ ಸಾಧನಾನಂದ ಎಂದು.) ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆಯಲು ಕಲ್ಕತ್ತೆಗೆ ಬಂದಿದ್ದ. ಆಗ ಶ್ರೀಮಾತೆಯವರು ಜಯರಾಮಬಾಟಿಯಲ್ಲಿದ್ದರು. ಹರಸುಂದರನೊಂದಿಗೆ ಶ್ರೀಹಟ್ಟದ ಒಬ್ಬರು ಭಕ್ತರ ಹಾಗೂ ಶ್ರೀಮಾತೆಯವರ ಶಿಷ್ಯರಾದ ಇಂದ್ರದಯಾಲ ಭಟ್ಟಾಚಾರ್ಯರ (ಮುಂದೆ ಅವರೇ ಸ್ವಾಮಿ ಪ್ರೇಮೇಶಾನಂದರು) ಒಂದು ಪರಿಚಯ ಪತ್ರವೂ ಇತ್ತು. ಹರಸುಂದರನಿಗೆ ಜಯರಾಮಬಾಟಿಗೆ ಹೋಗುವ ದಾರಿ ಗೊತ್ತಿರಲಿಲ್ಲ. ಆದ್ದರಿಂದ ನಾನು ಅವರನ್ನು ಕರೆದುಕೊಂಡು ಹೋದೆ. ಜಯರಾಮಬಾಟಿಗೆ ಹೋದ ಮೇಲೆ ಅವರು ಶ್ರೀಮಾತೆಯವರಿಗೆ ಹೇಳಿದರು, ''ಅಮ್ಮಾ, ನಾವು ನಿಮ್ಮಿಂದ ದೀಕ್ಷೆ ಪಡೆಯ ಬಯಸುತ್ತೇವೆ.'' ಅವರ ಬಳಿ 'ನಾವು' ಎಂದು ಹೇಳಿದ್ದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಏಕೆಂದರೆ ನನಗಿನ್ನೂ ದೀಕ್ಷೆಯ



ಬಗ್ಗೆ ಯಾವುದೇ ತಿಳಿವಳಿಕೆಯಿದ್ದಿರಲಿಲ್ಲ. ಆದರೆ ನಾನು ಸುಮ್ಮನಿದ್ದು ಬಿಟ್ಟೆ. ಇಂದ್ರದಯಾಲ ಬಾಬುಗಳ ಪರಿಚಿತರು ಎಂದು ತಿಳಿದ ಕೂಡಲೇ ಶ್ರೀಮಾತೆಯವರು ದೀಕ್ಷೆ ನೀಡಲು ಸಮ್ಮತಿ ನೀಡಿದರು. ಶ್ರೀಮಾತೆಯವರ ಸೇವಕರು ಈ ವಿಷಯ ತಿಳಿದಾಗ ಸಂತುಷ್ಟರಾಗಲಿಲ್ಲ ; ಕಾರಣ, ಆಗ ಶ್ರೀಮಾತೆಯವರ ದೇಹಾರೋಗ್ಯ ಚೆನ್ನಾಗಿರಲಿಲ್ಲ. ಅವರಿಗೆ ನಾವೆಲ್ಲ ಇಂದ್ರದಯಾಲ ಬಾಬುಗಳ ಪರಿಚಿತರು ಎಂದು ತಿಳಿದ ನಂತರ ಅವರು ಯಾವುದೇ ಚಕಾರವೆತ್ತಲಿಲ್ಲ. ಮರುದಿನವೇ ನಮ್ಮ ಮಂತ್ರದೀಕ್ಷೆ ನಡೆಯುವುದೆಂದು ನಮಗೆ ತಿಳಿಸಿದರು. ಶ್ರೀಮಾತೆಯವರು ರಾಸಬಿಹಾರಿ ಮಹಾರಾಜರಿಗೆ (ಸ್ವಾಮಿ ಅರೂಪಾನಂದರು) ಅನಂತರ ತಿಳಿಸಿದರಂತೆ: ''ಆ ಇಬ್ಬರು ಹುಡುಗರ ಸಂಸ್ಕಾರ ತುಂಬ ಚೆನ್ನಾಗಿದೆ. ಅವರಲ್ಲಿ ಭಕ್ತಿ, ವಿಶ್ವಾಸ, ತ್ಯಾಗ-ವೈರಾಗ್ಯಗಳಿವೆ. ಮುಂದೆ ಅವರು ಸಾಧುಗಳಾಗುತ್ತಾರೆ, ನೋಡು.''

ಮರುದಿನ ಬೆಳಿಗ್ಗೆ ಶ್ರೀಮಾತೆಯವರ ಸೇವಕರೊಬ್ಬರು ಬಂದು, ನಮ್ಮನ್ನು ಶ್ರೀಮಾತೆಯವರ ದೇವರಕೋಣೆಗೆ ಕರೆದುಕೊಂಡು ಹೋದರು. ಅಲ್ಲಿ ಈಗಾಗಲೇ ಶ್ರೀಮಾತೆಯವರು ಪೂಜೆ ಮಾಡುವ ಆಸನದಲ್ಲಿ ಕುಳಿತಿದ್ದರು. ಸಾಮಾನ್ಯವಾಗಿ ಅವರು ಯಾವಾಗಲೂ ತಮ್ಮ ಮುಖವನ್ನು ಸೆರಗಿನಿಂದ ಮರೆ ಮಾಡಿಕೊಂಡಿರುತ್ತಿದ್ದರು. ಆದರೆ ನಾವು ಅಲ್ಲಿಗೆ ಹೋದಾಗ ಅವರ ಮುಖ ಸಂಪೂರ್ಣವಾಗಿ ಅನಾವೃತವಾಗಿತ್ತು. ದೀಕ್ಷೆ

ಮುಗಿದ ನಂತರ ಅವರು ನಮಗೋಸ್ಕರ ಅಡುಗೆ ಮಾಡಲು ನೇರ ಅಡುಗೆ ಮನೆಗೆ ಹೋದರು. ಅವರು ತಮ್ಮ ದೇಹದ ಅನಾರೋಗ್ಯದ ಬಗ್ಗೆ ಸ್ವಲ್ಪವೂ ತೋರ್ಪಡಿಸಿಕೊಳ್ಳಲಿಲ್ಲ. ಗುರುವಾಗಿದ್ದುಕೊಂಡೂ ಅವರು ಎಷ್ಟೊಂದು ಸೇವೆ ಮಾಡುತ್ತಿದ್ದಾರಲ್ಲ! — ಈ ರೀತಿ ನಾನು ಮನಸ್ಸಿನಲ್ಲಿ ಭಾವಿಸಿಕೊಂಡೆ. ನಮಗೋಸ್ಕರ ಅವರು ಅಷ್ಟೊಂದು ಕಷ್ಟಪಟ್ಟು ಅಡುಗೆ ಮಾಡುತ್ತಿದ್ದಾರೆ. ದೀಕ್ಷೆಯನಂತರ ಇಡೀದಿನವೂ ಬೇರೆಯೇ ಒಂದು ಜಗತ್ತಿನಲ್ಲಿ ಇದ್ದಂತೆ ಕಳೆದುಹೋಯಿತು — ಅಲ್ಲಿ ಸ್ನೇಹ, ಪ್ರೀತಿ, ಆನಂದಗಳು ಮಾತ್ರ ಇದ್ದಂತೆ.

ಮರುದಿನ ಬೆಳಿಗ್ಗೆ ನಾವು ಕಲ್ಕತ್ತೆಗೆ ಹಿಂದಿರುಗಿದೆವು. ಶ್ರೀಮಾತೆಯವರಿಂದ ಬೀಳ್ಕೊಂಡು ಹೊರಡುವಾಗ ತುಂಬ ದುಃಖವುಂಟಾಯಿತು. ದಾರಿಯಲ್ಲಿ ತಿನ್ನುವುದಕ್ಕಾಗಿ ಶ್ರೀಮಾತೆಯವರು ನಮಗೆ ಒಂದು ಪೊಟ್ಟಣದಲ್ಲಿ ಪುರಿ ಹಾಗೂ ಬೆಲ್ಲ ಕಟ್ಟಿಕೊಟ್ಟರು. ಬೀಳ್ಕೊಳ್ಳುವಾಗ ನಾವು ಅವರಿಗೆ ಪ್ರಣಾಮ ಮಾಡಿದೆವು. ಆಗ ಅವರು ನಮಗೆ ಚೆನ್ನಾಗಿ ಆಶೀರ್ವಾದ ಮಾಡಿದರು. ಅವರ ಎರಡೂ ಕಣ್ಣುಗಳಲ್ಲಿ ನೀರು ತುಂಬಿದ್ದವು. ನಾವೂ ಅಳತೊಡಗಿದೆವು. ಚಾಪಾಡಾಂಗಾ ಮೂಲಕ ನಾವು ಕಲ್ಕತ್ತೆಗೆ ಮರಳಿದೆವು. ಆಗ ಗಂಡುಮಕ್ಕಳಾಗಿದ್ದರೆ ಈ ರೀತಿ ಸಮಯ ತೆಗೆದುಕೊಳ್ಳುತ್ತಿದ್ದರು; ಹೆಣ್ಣು ಮಕ್ಕಳಿದ್ದರೆ ಇನ್ನೂ ಒಂದು-ಒಂದೂವರೆ ದಿನ ಹೆಚ್ಚು ಬೇಕಿತ್ತು.

ಶ್ರೀಮಾತೆಯವರಿಂದ ಬೀಳ್ಕೊಳ್ಳುವಾಗ ನಮ್ಮ ಜೊತೆಗಿದ್ದವರು ಕೇಳಿದರು : ''ಅಮ್ಮಾ, ಎಷ್ಟು ಬಾರಿ ಮಂತ್ರ ಜಪ ಮಾಡಬೇಕು? ಸಾವಿರ, ಹತ್ತು ಸಾವಿರವೆ, ಅಥವಾ ಇನ್ನೂ ಹೆಚ್ಚು ಮಾಡಬೇಕೆ?'' ಅದಕ್ಕೆ ಶ್ರೀಮಾತೆ ಹೇಳಿದರು, ''ಮಗೂ, ನೀನು ಇನ್ನೂ ವಿದ್ಯಾರ್ಥಿ. (ಹರಸುಂದರ ಆಗ ಹತ್ತನೇ ತರಗತಿಯಲ್ಲಿ ಓದುತ್ತಿದ್ದ. ನಾನು ಇಂಟರ್ ಮೀಡಿಯೆಟ್ ಮೊದಲ ವರ್ಷ. ಹರಸುಂದರ ವಯಸ್ಸಿನಲ್ಲಿ ನನಗಿಂತ ತುಸು ದೊಡ್ಡವನಾಗಿದ್ದ.) ತುಂಬಾ ಓದಬೇಕು. ಪರೀಕ್ಷೆಗೆ ಕುಳಿತುಕೊಳ್ಳಬೇಕು. ಈಗ ಹೆಚ್ಚು ಜಪ ಮಾಡಲು ಸಾಧ್ಯವಿಲ್ಲ. ಮುಂದೆ ಸಮಯ ಸಿಕ್ಕಿದರೆ ನಿಧಾನವಾಗಿ ಹೆಚ್ಚಿಸಿಕೊಳ್ಳಿ. ಅಲ್ಲದೆ, ಠಾಕೂರರು ನನಗೆ ಹೇಳಿದ್ದರು, ರಾಮಕೃಷ್ಣ ನಾಮವನ್ನು ಹತ್ತು ಬಾರಿ ಮಾಡಿದರೂ ಸಾಕು. ಅದೇ ಬೇಕಾದಷ್ಟು ಅಂತ. ಠಾಕೂರರು ಜಗತ್ತಿನಲ್ಲಿ ಆಧ್ಯಾತ್ಮಿಕವಾಗಿ ಮಂಗಳವನ್ನುಂಟುಮಾಡಲು ಸ್ವತಃ ತಾವೇ ಕಠೋರ ತಪಸ್ಸು ಮಾಡಿ, ಎಲ್ಲೆಡೆ ಭಗವದ್‌ಭಾವದ ಜಾಗೃತಿಯನ್ನು ಮಾಡಿ ಹೋದರು. ಪ್ರಾಮಾಣಿಕತೆ, ವ್ಯಾಕುಲತೆ, ಅನುರಾಗ, ಪ್ರೀತಿ ಇವುಗಳಿಂದ ಸಾಧನೆ-ಭಜನೆ ಮಾಡಿದರೆ, ಈಗ ಸ್ವಲ್ಪ ಪ್ರಯತ್ನದಿಂದಲೇ ಸಾಫಲ್ಯವುಂಟಾಗುವುದು.'' ಈ ಸರಳ ವಿಧಾನವನ್ನು ಕೇಳಿ ನಾವು ಪುಳಕಿತರಾದೆವು. ಕಲ್ಕತ್ತೆಗೆ ಬಂದನಂತರ ನಾವು ಈ ಮಾತುಗಳನ್ನು ಸ್ವಾಮಿ ಶಾರದಾನಂದರಿಗೆ ತಿಳಿಸಿದಾಗ ಅವರೆಂದರು: ''ಹೌದು, ಮನಸ್ಸನ್ನು ಸ್ಥಿರವಾಗಿಸಲು ಸಾಧ್ಯವಾದರೆ, ಮನಸ್ಸನ್ನು ವಶದಲ್ಲಿ ಇಟ್ಟುಕೊಳ್ಳಲು ಸಾಧ್ಯವಾದರೆ ಹತ್ತುಬಾರಿ ಜಪ ಮಾಡಿದರೂ ಬೇಕಾದಷ್ಟು.''

ಸ್ವಾಮಿ ನಿರ್ವೇದಾನಂದರಿಗೆ ನಮ್ಮ ದೀಕ್ಷೆಯ ವಿಷಯ ತಿಳಿಸಿದಾಗ ಅವರು ಬಹಳ ಆನಂದಗೊಂಡರು. ನಾನು ಅವರಿಗೆ ಹೇಳಿದೆ, ರಾಜಾ ಮಹಾರಾಜರು ನನಗೆ ಶ್ರೀಮಾತೆಯವರ ದರ್ಶನ ಪಡೆಯಲು ಪೌಷ ಮಾಸದಲ್ಲಿ ಹೋಗಲು ಹೇಳಿದ್ದರು ಎಂಬುದಾಗಿ. ನಾನು ಜಯರಾಮಬಾಟಿಯಿಂದ ಕಲ್ಕತ್ತೆಗೆ ಮರಳಿದಾಗ ನನಗೆ ರಾಜಾ ಮಹಾರಾಜರ ಮಾತು ನೆನಪಿಗೆ ಬಂತು. ಆದರೆ ಸಂತಸದ ವಿಷಯವೆಂದರೆ, ಆಗ ಪೌಷ ಮಾಸವೇ ನಡೆಯುತ್ತಿತ್ತು. ನಾನು ರಾಜಾ ಮಹಾರಾಜರ ಮಾತನ್ನು ನಿಜಕ್ಕೂ ಮನ್ನಿಸಿದ್ದೆ; ಆದರೆ ನನಗೆ ಅರಿವಿಲ್ಲದೆಯೇ ಪೌಷ ಮಾಸದಲ್ಲಿ ಶ್ರೀಮಾತೆಯವರ ದರ್ಶನಕ್ಕೆ ಹೋಗಿದ್ದೆ. ಸ್ವಾಮಿ ನಿರ್ವೇದಾನಂದರು ಹೇಳಿದರು, ''ನಿನಗೆ ಗೊತ್ತೆ? ರಾಜಾ ಮಹಾರಾಜರು ಶ್ರೀಮಾತೆಯವರ ದರ್ಶನವನ್ನು ಪೌಷ ಮಾಸದಲ್ಲಿ ಮಾಡಲು ಹೇಳಿದ್ದೇಕೆ? ಕಾರಣ, ಪೌಷ ಮಾಸದಲ್ಲಿ ಕಾಳೀಮಾತೆಯ ದರ್ಶನ ಮಾಡಬೇಕೆಂಬ ಮಾತು ಪ್ರಚಲಿತದಲ್ಲಿದೆ. ಶ್ರೀಮಾತೆ ಸ್ವಯಂ ಕಾಳೀಮಾತೆಯೇ ಆಗಿದ್ದಾರೆ.'' ಈ ರೀತಿ ನನಗೆ ಜೀವನದಲ್ಲಿ ಲಭಿಸಿದ ಅತ್ಯುತ್ತಮ ಆಶೀರ್ವಾದ ಈ ರೀತಿಯಲ್ಲಿ ಅದ್ಭುತವಾದುದು; ಅನಿರೀಕ್ಷಿತವಾಗಿ ಶ್ರೀಮಾತೆಯವರಿಂದ ಲಭಿಸಿದ ಕೃಪಾಲಾಭ.

ಒಂದೆರಡು ತಿಂಗಳಲ್ಲಿ ಶ್ರೀಮಾತೆಯವರ ಆರೋಗ್ಯ ಕೆಟ್ಟು ಹೋದದ್ದರಿಂದ ಅವರನ್ನು ಕಲ್ಕತ್ತೆಗೆ ಕರೆದುಕೊಂಡು ಬಂದರು. ನಮ್ಮ ದೀಕ್ಷೆಯ ನಂತರ ಕೇವಲ ಇಬ್ಬರಿಗೆ ಮಾತ್ರ ಶ್ರೀಮಾತೆಯವರು ಮಂತ್ರದೀಕ್ಷೆ ನೀಡಿದರು ಎಂದು ನಾನು ಕೇಳಿದೆ. ಈ ಬಾರಿ ನಾನು ಶ್ರೀಮಾತೆಯವರ ಭೇಟಿ ಮಾಡಲು ಕಲ್ಕತ್ತೆಗೆ ಹೋಗಿ, 'ಉದ್ಬೋಧನ'ಕ್ಕೆ ಹೋಗಿದ್ದೆ. ಆಗ ಶ್ರೀಮಾತೆಯವರ ದರ್ಶನ ಪಡೆಯಲು ಬಂದವರನ್ನು ಎರಡನೇ ಅಂತಸ್ತಿಗೆ ಬಿಡುತ್ತಿರಲಿಲ್ಲ. ಕೆಳ ಅಂತಸ್ತಿನ ಮೆಟ್ಟಿಲ ಬಳಿ ನಿಂತುಕೊಂಡೇ ಶ್ರೀಮಾತೆಯವರಿಗೆ ಪ್ರಣಾಮ ಮಾಡಬೇಕೆಂದು ಸ್ವಾಮಿ ಶಾರದಾನಂದರು ನನಗೆ ಹೇಳಿದರು.

ಕೆಲವು ದಿನಗಳ ನಂತರ ಕಾಲೇಜಿನಲ್ಲಿ ನನ್ನ ಸ್ನೇಹಿತರೊಬ್ಬರು ತಿಳಿಸಿದರು, ಶ್ರೀಮಾತೆಯವರು ಇಹಲೋಕವನ್ನು ತ್ಯಜಿಸಿದರು ಎಂಬುದಾಗಿ. ಕೂಡಲೇ ನಾನು ಕಾಲೇಜಿನಿಂದ ಹೊರಟು ಬೇಲೂರು ಮಠಕ್ಕೆ ಹೋದೆ. ಬೇಲೂರು ಮಠದಲ್ಲಿ ಗಂಗಾತೀರದಲ್ಲಿ ಶ್ರೀಮಾತೆಯವರ ದೇಹವನ್ನಿಟ್ಟ ಸ್ಥಳದಲ್ಲಿ ಭಕ್ತಾದಿಗಳ ಜನಸಂದಣಿ ದೊಡ್ಡದಾಗಿತ್ತು. ಅವರ ಅಂತ್ಯಕ್ರಿಯೆ ನಡೆದ ನಂತರ ಶ್ರೀಮಾತೆಯವರ ಚಿತಾಭಸ್ಮವನ್ನು ಸಂಗ್ರಹಿಸಲು ಅನೇಕ ಮಂದಿ ಭಕ್ತರು ಗದ್ದಲ ಮಾಡಿದರು; ಆದರೆ ಸ್ವಾಮಿ ಶಾರದಾನಂದರು ಅವರನ್ನು ಹಾಗೆ ಮಾಡಬೇಡಿರೆಂದು ತಡೆದರು.

ಪರಾಪ್ರಕೃತಿಯಾದ ಆದ್ಯಾಶಕ್ತಿಯು ಮತ್ತೊಮ್ಮೆ ತಮ್ಮ ಸ್ವರೂಪದಲ್ಲಿ ಲಯ ಹೊಂದಿದಳು. ❖